

ಈ ದಾರಿ ನಡಿಗೆ ಅಷ್ಟು ಸುಲಭವಲ್ಲ..



ಚಾರಣ ತಂಡ

ಸೂರ್ಯ. ಒಮ್ಮೆ ಸೂರ್ಯ ರಶ್ಮಿ ಮಾಯವಾದರೆ ಚಳಿ ದುಪ್ಪಟ್ಟು. ಸಂಜೆ ಐದಾರು ಗಂಟೆಯಾಗುತ್ತಿದ್ದ ಹಾಗೆ ಟೆಂಟಿನೊಳಗೆ ತೂರಿಕೊಳ್ಳಲೇಬೇಕು. ಮಾರನೇ ದಿನ ಬೆಳಗ್ಗೆ ನಮ್ಮ ನಡಿಗೆ ಶುರುವಾಗುವುದರಲ್ಲಿತ್ತು.

ಮೊದಲ ದಿನ, ತಿಲತ್ ಸುಮ್ಡೋವಿನಿಂದ ಶಿಂಗ್ರಾ ಕೋಮಾಕ್ಕೆ ಹತ್ತು ಕಿಲೋಮೀಟರುಗಳ ದಾರಿ. ಈಗ ತಾನೇ ಕಟ್ಟಿಕೊಳ್ಳುತ್ತಿರುವ ಹಿಮದ ಹಾಳೆಗಳ ತೆಳು ಹಾದಿ ಕೆಲವೆಡೆ. ಮಂಜಿನ ಮೇಲೆ ನಡೆಯಲು ಕೊಂಚ ಅಭ್ಯಾಸ ಅತ್ಯಗತ್ಯ. ನಾನಂತೂ ನಾಲ್ಕನೇ ಹೆಜ್ಜೆಗೇ ಜಾರಿ ಬಿದ್ದು ಉದ್ಘಾಟನೆ ಮಾಡಿದೆ. ಗಂ ಬೂಟುಗಳನ್ನು ಹಾಕಿಕೊಂಡು ಜಾರುಹಾದಿಯ ಮೇಲೆ ನಡೆಯುವುದು ಹೇಗೆಂದು ಅರ್ಥವಾಗಲೇ ಕೆಲ ಹೊತ್ತು ಬೇಕಾಗುತ್ತದೆ. ಕಣಿವೆಯ ಹಾದಿಯಲ್ಲಿ, ಮಂಜಾದ ನದಿಯ ಮೇಲೆ ನಡೆಯುತ್ತ ಹೋಗುವುದೇ ರೋಮಾಂಚಕಾರಿ. ನೀರ ಹರಿವು ನೀರ್ಗಲ್ಲಾಗಿ ಬದಲಾಗಿ ಬಗೆ ಬಗೆಯ ರೂಪದಲ್ಲಿ ಸೊಗಸಾದ ಕಲಾಕೃತಿಗಳಂತೆ ಕಾಣುತ್ತಿದ್ದವು. ನಮಗೆ ದಾರಿ ತೋರುವ ಶೆರ್ಪಾಗಳು ನಮ್ಮಂತೆ ಯಾವುದೇ ಹತಾರು ಇಟ್ಟುಕೊಳ್ಳದೇ ಆ ಹಿಮದ ಹಾದಿಯಲ್ಲಿ ಲೀಲಾಜಾಲವಾಗಿ ನಡೆಯುವುದನ್ನು ನೋಡುವುದೇ ಸೊಗಸು. ಮರದ ಜಾರುಬಂಡಿ ಮಾಡಿಕೊಂಡು ಅದರ ಮೇಲೆ ಅಡುಗೆ ಸಾಮಗ್ರಿಗಳನ್ನೂ ಟೆಂಟುಗಳನ್ನೂ ತಳ್ಳಿಕೊಂಡು ಅವರುಗಳು ಪಟಪಟ ನಡೆಯುತ್ತಿದ್ದರೆ, ನಮ್ಮದು ಗಜಗಮನ. ಸಟ್ಟನೆ ಕಾಲ ಕೆಳಗೆ ತೆರೆದುಕೊಳ್ಳುವ ಮಂಜು, ಬಳಕ್ಕನೆ ಮೇಲೆ ನುಗ್ಗುವ ನೀರು, ಎಚ್ಚರದ ನಡೆಗೆ ಒತ್ತು ಕೊಟ್ಟು ನಮ್ಮ ನಡಿಗೆ ಸಾಗಿತ್ತು. ಸ್ವಲ್ಪ ದೂರ ಹೋದೊಡನೆ ನಮ್ಮ ಗೈಡ್ ಸದ್ದೇ ಮಾಡದೆ ಸನ್ನೆ ಮಾಡಿದ – ಗುಡ್ಡಗಳ ಕಡೆ ನೋಡಿ ಎಂಬಂತೆ. ಸ್ವಲ್ಪ ಹೊತ್ತು ಕಣ್ಣು ಕೀಲಿಸಿ ನೋಡಿದ ಮೇಲೆ ಅಲ್ಲಿ ಮೇಯುತ್ತಿದ್ದ ಮಣ್ಣು ಬಣ್ಣದ ಬೆಟ್ಟದ ಕುರಿಗಳು ಕಂಡವು! ಅದೃಷ್ಟವಿದ್ದವರಿಗೆ ಇಲ್ಲೆಲ್ಲ ಹಿಮಚಿರತೆ ಕಂಡಿದ್ದೂ ಇದೆ!

ಹತ್ತು ಕಿಲೋಮೀಟರುಗಳ ದಾರಿ ಸಾಗಲು ಬೇಕಾಗಿದ್ದು 5–6 ತಾಸುಗಳ ಸಮಯ. ಮೊದಲ ದಿನ, ಶಿಂಗ್ರಾಕೋಮಾ ಎಂಬ ಜಾಗದಲ್ಲಿ ನಮ್ಮ ವಿಶ್ರಾಂತಿ. ಲಢಾಕೀ ಭಾಷೆಯಲ್ಲಿ ಶಿಂಗ್ರಾ ಎಂದರೆ ಒಂದು ಬಗೆಯ ಔಷಧೀಯ ಸಸ್ಯವಂತೆ. ಆ ಭಾಗದಲ್ಲಿ ಆ ಸಸ್ಯ ಹೇರಳವಾಗಿದ್ದಕ್ಕೆ ಆ ಹೆಸರು ಎಂದು ನಮ್ಮ ಶೆರ್ಪಾನೊಬ್ಬ ಹೇಳಿದ.

ಎರಡನೇ ದಿನ, ಶಿಂಗ್ರಾಕೋಮಾದಿಂದ ಟಿಬ್ ಎಂಬ ಸ್ಥಳ ನಮ್ಮ ಗಮ್ಯ. ಈ ಟಿಬ್ ದಾರಿಯಲ್ಲಿ ಮಂಜು ಇನ್ನೂ ಗಟ್ಟಿಗೊಂಡಿದ್ದು, ನಡೆಯುವ ಕಲೆಯನ್ನೂ ಅರಿತ ಕಾರಣ ದಾರಿ ಸುಲಭ ಅಂತನ್ನಿಸಿತು. ಒಟ್ಟಾರೆ ನಡೆಯಬೇಕಾದ್ದು 17 ಕಿಲೋಮೀಟರು. ಕಾಲ ಕೆಳಗೆಲ್ಲೋ ಸದ್ದು ಮಾಡುತ್ತ ಹರಿಯುವ ನದಿ. ಮೇಲುಗಡೆ ಹೆಪ್ಪುಗಟ್ಟಿದ ಹಿಮ! ಮೊದಲ ದಿನ ತೆಳು ಹಿಮ ಎಲ್ಲಿದೆ ಎಂದು ಗೊತ್ತಿಲ್ಲದ ನಾವುಗಳು ಅದರೊಳಗೆ ಕಾಲು ಹಾಕಿ ಬಿದ್ದು ಬೇಸ್ತು ಬೀಳುತ್ತಿದ್ದೆವು. ಎರಡನೇ ದಿನದ ಹೊತ್ತಿಗೆ ಮಂಜು ಎಲ್ಲಿ ಗಟ್ಟಿಗೊಂಡಿದೆ, ಎಲ್ಲಿ ಚಿಪ್ಪಿನಷ್ಟೇ ತೆಳು ಎಂಬುದನ್ನು ಅರಿತುಕೊಂಡಿದ್ದೆವು.

ನೀರಿನ ಹರಿವು ಕಾಣಿಸುವಲ್ಲಿ ಮಂಜುಗಟ್ಟಿದ ನದಿಯ ಅಂಚಲ್ಲಿ ನಿಂತು ಹರಿಯುವ ನೀರಿಗೆ ಕೈಯೊಡ್ಡಿದರೆ, ಕರುಳಿನಾಳವೂ ತಣ್ಣಗಾದ ಹಾಗಾಗುತ್ತದೆ. ಮಂಜುಗಡ್ಡೆಯಾಗಿರುವ ನದಿಯ ಕೆಳಸ್ತರದಲ್ಲಿ ರಭಸದ ಹರಿವೂ ಇರುತ್ತದೆ. ನಡೆಯುತ್ತ ಕಣಿವೆಯ ತಿರುವೊಂದನ್ನು ದಾಟಿದರೆ ಕಂಡಿದ್ದು ಅರೆ ಹೆಪ್ಪುಗಟ್ಟಿದ ಜಲಪಾತ! ಪಕ್ಕದಲ್ಲೊಂದು ನೀರ್ಗಲ್ಲೇ ಆದಂತಿರುವ ಇನ್ನೊಂದು ಸಲಿಲಧಾರೆ!

ಅಂದು ರಾತ್ರಿ ಟಿಬ್‌ನಲ್ಲಿ 28 ಡಿಗ್ರಿಯ ಅಸಾಧ್ಯ ಚಳಿ. ಗುಂಪಾಗಿ ಹೋಗಿದ್ದ ನಮ್ಮ ತಂಡ ಅಡುಗೆಯ ಟೆಂಟ್‌ನಲ್ಲೇ ಜಾಗ ಹೊಂದಿಸಿಕೊಂಡು ಇಸ್ಪೀಟಾಡಿ ಹೊತ್ತು ಕಳೆದೆವು. ಎಂತಹುದೇ ಚಳಿ ಇರಲಿ, ಶೆರ್ಪಾಗಳ ತಂಡ ಮಾತ್ರ ನಗುಮೊಗದಿಂದಲೇ, ಅಡುಗೆ ಮಾಡುತ್ತ, ಮಂಜುಗಡ್ಡೆ ಒಡೆದು ನೀರು ಬಿಸಿ ಮಾಡುತ್ತ ನಮಗೂ ರುಚಿಯಾದ ಊಟ ಹಾಕುತ್ತಿದ್ದರು. ಟಿಬ್‌ನಿಂದ ಮುಂದಿನ ಹಾದಿ, ನೆರಕ್‌ಗೆ. ಹನ್ನೆರಡು ಕಿಲೋಮೀಟರುಗಳ ಈ ಹಾದಿ ರಮಣೀಯ. ಕ್ಲಿಷ್ಟವಾದ ಹಾದಿ ಸಾಗಿದರೆ, ನೆರಕ್ ಎಂಬ ಹಳ್ಳಿ ಸಿಗುತ್ತದೆ. ಅಲ್ಲೊಂದು ಸೊಗಸಾದ ಹೆಪ್ಪುಗಟ್ಟಿದ ಜಲಪಾತವೂ ಇದೆ. ಈ ಹಳ್ಳಿಯಲ್ಲಿ ಫೋನ್ ಸೌಲಭ್ಯವಿದ್ದು, ನಾಗರಿಕತೆಗೆ ಮರಳಿದ ಅನುಭವ ಆಗುತ್ತದೆ!

ನೆರಕ್ ಹಳ್ಳಿಯ ಮಂದಿಗೆ ಇದು ನಿತ್ಯ ಪಯಣದ ದಾರಿ ಎನ್ನುವುದು ಯೋಚಿಸುವ ವಿಚಾರ. ನಮಗೆ ಟ್ರೆಕ್ಕಿಂಗ್ ಮಾತ್ರವೇ ಆದರೆ, ಅವರಿಗೆ ಜೀವನಕ್ಕಿದು ಅನಿವಾರ್ಯ ಕರ್ಮ. ನೆರಕ್‌ನಿಂದ ಮರಳಲು, ಮತ್ತದೇ ದಾರಿ. ಹೋದಾಗ ಇದ್ದಂತಿರದ ನದಿಯ ಚರ್ಯೆ, ಅಚ್ಚರಿ ಮೂಡಿಸಿತು. ಎಲ್ಲೋ ಹೆಪ್ಪುಗಟ್ಟಿದ ನದಿ, ಇನ್ನೆಲ್ಲೋ ಹರಿಯುತ್ತಿತ್ತು. ಬಂದಾಗ ಗಟ್ಟಿ ಹಿಮದ ಬಂಡೆ ಇದ್ದಲ್ಲೀಗ ಜೋರು ಸೆಳವಿನ ಹರಿವು!

## ಪ್ರಕೃತಿಯ ಆಶೀರ್ವಾದ ಇದ್ದರಷ್ಟೇ ಚಾರಣ

ಈ ಚಾದರ್ ಚಾರಣಕ್ಕೆ ಪ್ರಕೃತಿಯ ಅಶೀರ್ವಾದ ಇದ್ದೇ ಇರಬೇಕು. ಇಲ್ಲವಾದಲ್ಲಿ ಇಡಿಯ ಚಾರಣವೇ ಸಾಧ್ಯವಿಲ್ಲದೆ ಹೋಗಬಹುದು. ಹೆಪ್ಪುಗಟ್ಟುವ ಚಳಿ ಇದ್ದರಷ್ಟೇ ನದಿಯು ಹಿಮವಾಗಿ ಬದಲಾಗುತ್ತದೆ. ಝುಂಸ್ಕಾರ್ ಈಗ ಮೊದಲಿನಂತೆ ಮಂಜುಗಟ್ಟುತ್ತಿಲ್ಲ ಎಂದು ಸ್ಥಳೀಯರೇ ಹೇಳುತ್ತಿದ್ದಾರೆ. ಹೆಚ್ಚುತ್ತಿರುವ ಜಾಗತಿಕ ತಾಪಮಾನವೂ ಇದಕ್ಕೆ ಕಾರಣ. ಅದಲ್ಲದೇ ಮೊದಲು ಮೂರು ನಾಲ್ಕು ತಿಂಗಳುಗಳ ಕಾಲ ನೀರ್ಗಲ್ಲಾಗುತ್ತಿದ್ದ ನದಿ, ಈಗ ಒಂದೆರಡು ತಿಂಗಳುಗಳ ಕಾಲವಷ್ಟೇ ಹಿಮವಾಗುತ್ತಿದೆ. ಪರಿಸರದ ಬಗ್ಗೆ ಕಾಳಜಿ ಇಲ್ಲದ ಮಂದಿ ಧಾಂಗುಡಿಯಿಟ್ಟ ಕಾರಣಕ್ಕೂ ನದಿ ಮುನಿಸಿಕೊಂಡಿದೆ ಎಂದು ಅಲ್ಲಿನ ಮಂದಿ ಬೇಸರ ವ್ಯಕ್ತಪಡಿಸುತ್ತಾರೆ.

ಅಲ್ಲಿನ ಕಂದು ಬಣ್ಣದ ಉದ್ದುದ್ದ ಪರ್ವತಗಳ ಮಧ್ಯೆ ಮೌನವಾಗಿ ನಡೆಯುತ್ತಿದ್ದರೆ, ಕೇಳುವುದು ಕಾಲ ಕೆಳಗಿನ ಮಂಜು ಮಾಡುವ ಸದ್ದು ಮಾತ್ರ. ದೇಶಕಾಲಗಳ ಮಾಯೆಯನ್ನು ಮೀರಿದ, ಸಹಸ್ರ ಸಹಸ್ರ ವರುಷಗಳಿಂದ ಹಾಗೆಯೇ ಬಿದ್ದುಕೊಂಡಿರುವ ದೊಡ್ಡ ಸರೀಸೃಪದಂತಹ ಈ ಕಣಿವೆಯೊಳಗೆ ಸುಮ್ಮಗೆ ನಡೆಯುವುದು ಕೂಡ ಅಂತರಂಗಕ್ಕೆ ಅನಿರ್ವಚನೀಯ ಆನಂದದ ಅನುಭವ. ಇಂಥ ದಾರಿಯಲ್ಲಿ ಅಚಾನಕ್ಕಾಗಿ ಹಿಮಪಾತವಾದಾಗ ಮೇಲೆ ಕೆಳಗೆಲ್ಲ ಶ್ವೇತವರ್ಣವೇ ತುಂಬಿಕೊಂಡು, ಮೇಲೆ ಆಗಸದ ನೀಲಿ ಕೆಳಗೆ ಬಿಳಿಯ ಮನೋಹರ ವರ್ಣ ವಿನ್ಯಾಸ ರೂಪುಗೊಂಡು ಕಣ್ಮನಗಳಿಗೆ ತಂಪನ್ನುಟುಮಾಡುತ್ತವೆ.